**ದಿನಾಂಕ:14-07-2017ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರ ಅಧ್ಯಕ್ಷತೆಯಲ್ಲಿ, ನಡೆದ ಜಿಲ್ಲಾ ಮಟ್ಟದ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಅಡುಗೆ ಸಹಾಯಕರು ಹಾಗೂ ಕಾವಲುಗಾರರ ಹುದ್ದೆಗಳ ನೇರ ನೇಮಕಾತಿ ಆಯ್ಕೆ ಸಮಿತಿ ಸಭೆಯ ನಡಾವಳಿಗಳು.**

---

ಹಾಜರಿದ್ದವರು.

| ಕ್ರ ಸಂ | ಅಧಿಕಾರಿಗಳ ವಿವರ | ಪದನಾಮ |
|---|---|---|
| 1 | ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ. | ಅಧ್ಯಕ್ಷರು |
| 2 | ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ. (ಪರವಾಗಿ) | ಸದಸ್ಯರು |
| 3 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ. | ಸದಸ್ಯರು |
| 4 | ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಮಂಡ್ಯ. | ಸದಸ್ಯರು |
| 5 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಮಂಡ್ಯ. | ಸದಸ್ಯರು |
| 6 | ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮಂಡ್ಯ. | ಸದಸ್ಯರು |
| 7 | ಉಪ ನಿರ್ದೇಶಕರು,ಸಮಾಜ ಕಲ್ಯಾಣ ಇಲಾಖೆ,ಮಂಡ್ಯ ಜಿಲ್ಲೆ, ಮಂಡ್ಯ. | ಸದಸ್ಯ ಕಾರ್ಯದರ್ಶಿ |

ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ ಇವರು ಮಾತನಾಡಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ 40 ಅಡುಗೆ ಸಹಾಯಕರು ಮತ್ತು 33 ಕಾವಲುಗಾರರ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳುವ ಸಂಬಂಧ ಅಧಿಸೂಚನೆಯನ್ನು ಹೊರಡಿಸಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಸರ್ಕಾರದ ಆದೇಶದಂತೆ ಜಿಲ್ಲಾ ಎನ್.ಐ.ಸಿ ಅಧಿಕಾರಿಗಳು ಆನ್‌ಲೈನ್‌ನಲ್ಲಿ ಸ್ವೀಕೃತವಾಗಿರುವ ಒಟ್ಟಾರೆ ಅರ್ಜಿಗಳಲ್ಲಿ ಎಸ್.ಎಸ್.ಎಲ್.ಸಿ/ತತ್ಸಮಾನ ವಿದ್ಯಾರ್ಹತೆಯ ಅಂಕಗಳ ಜೇಷ್ಠತೆಯನ್ವಯ ಹಾಗೂ ಪ್ರವರ್ಗವಾರು ಮೀಸಲಾತಿಯನ್ವಯ 1:5 ಅನುಪಾತದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ನೀಡಿರುತ್ತಾರೆ. ಸದರಿ ಪಟ್ಟಿಯನ್ನು ಅನುಸರಿಸಿ ಅಡುಗೆ ಸಹಾಯಕರ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ದಿನಾಂಕ:21-06-2017 ಹಾಗೂ 28-06-2017ರಂದು ಹಾಗೂ ಕಾವಲುಗಾರರ ಹುದ್ದೆಗೆ ದಿನಾಂಕ:24-06-2017ರಂದು ದಾಖಲಾತಿ ಪರಿಶೀಲನೆಯನ್ನು ಮಾಡಲಾಗಿರುತ್ತದೆ.

ಅಡುಗೆ ಸಹಾಯಕರು ಮತ್ತು ಕಾವಲುಗಾರರ ಹುದ್ದೆಗೆ ಅರ್ಜಿ ಸಲ್ಲಿಸಿ, ದಾಖಲಾತಿ ಪರಿಶೀಲನೆಯಲ್ಲಿ ಅರ್ಹರಾಗಿರುವ ಅಭ್ಯರ್ಥಿಗಳ 1:3 ಅನುಪಾತದಂತೆ ಜಿಲ್ಲಾ ಎನ್.ಐ.ಸಿ. ಅಧಿಕಾರಿಗಳಿಂದ ಅಭ್ಯರ್ಥಿಗಳ ಪಟ್ಟಿಯನ್ನು ಪಡೆದು ಈ ಅಭ್ಯರ್ಥಿಗಳಿಗೆ ದಿನಾಂಕ:05-07-2017ರಂದು ಅಡುಗೆ ತಯಾರಿಕೆ ಪ್ರಯೋಗಿಕಾ ಪರೀಕ್ಷೆಯನ್ನು ಮತ್ತು ಕಾವಲುಗಾರರ ಹುದ್ದೆಗೆ ದಿನಾಂಕ:06-07-2017ರಂದು ದೈಹಿಕ ಸಾಮರ್ಥ್ಯ ಪರೀಕ್ಷೆಗೆ ದಿನಾಂಕವನ್ನು ನಿಗಧಿಪಡಿಸಿ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ಆದರೆ ಸದರಿ ಪ್ರಕಟಣೆಯು ಜಿಲ್ಲಾ ವೆಬ್‌ಸೈಟ್‌ನಲ್ಲಿ ಪ್ರಕಟವಾಗಿರುವುದಿಲ್ಲ.

ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು ಮಾತನಾಡಿ, ಅಡುಗೆ ತಯಾರಿಕೆ ಪ್ರಯೋಗಿಕಾ ಪರೀಕ್ಷೆಗೆ ಮತ್ತು ಕಾವಲುಗಾರರ ಹುದ್ದೆಗೆ ಸ್ಥಳ ಮತ್ತು ದಿನಾಂಕವನ್ನು ನಿಗಧಿಪಡಿಸಿರುವ ಪ್ರಕಟಣೆಯು ಜಿಲ್ಲಾ ವೆಬ್‌ಸೈಟ್‌ನಲ್ಲಿ ಪ್ರಕಟವಾಗದ ಕಾರಣ ಅಡುಗೆ ಪ್ರಾಯೋಗಿಕ ಪರೀಕ್ಷೆ ಮತ್ತು ಕಾವಲುಗಾರರ ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಅರ್ಹರಾಗಿ ಗೈರು ಹಾಜರಾಗಿರುವ ಅಭ್ಯರ್ಥಿಗಳಿಗೆ ಅಡುಗೆ ಪ್ರಾಯೋಗಿಕ ಪರೀಕ್ಷೆ ಮತ್ತು ಕಾವಲುಗಾರರ ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದೇ ಇರುವ ಸಂಭವವಿರುವುದರಿಂದ ಈ ಅರ್ಹ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶವನ್ನು ನೀಡುವುದು ಸೂಕ್ತವಾಗಿರುತ್ತದೆ ಎಂದು ತಿಳಿಸಿ ಈ ಬಗ್ಗೆ ಮತ್ತೊಂದು ದಿನಾಂಕವನ್ನು ನಿಗಧಿಪಡಿಸಿ ಎಲ್ಲಾ ಅಭ್ಯರ್ಥಿಗಳಿಗೆ ಜಿಲ್ಲಾ ವೆಬ್‌ಸೈಟ್ ಮೂಲಕ ಹಾಗೂ ನೋಂದಣಿ ಅಂಚೆ ಮೂಲಕ ಮಾಹಿತಿ ನೀಡಿ ಪ್ರಾಯೋಗಿಕ ಪರೀಕ್ಷೆ ಹಾಗೂ ದೈಹಿಕ ಸಾಮರ್ಥ್ಯ ಪರೀಕ್ಷೆಗಳನ್ನು ನಡೆಸಲು ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮಂಡ್ಯ ರವರಿಗೆ ಸೂಚಿಸಿದರು.

ಅದರಂತೆ, ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮಂಡ್ಯ ರವರು ದಿನಾಂಕ: 24-07-2017 ರಂದು 1:3 ಅನುಪಾತದಲ್ಲಿ ಅರ್ಹರಾಗಿ ಗೈರು ಹಾಜರಾದ ಅಭ್ಯರ್ಥಿಗಳಿಗೆ ಅಡುಗೆ ತಯಾರಿಕೆ ಪ್ರಾಯೋಗಿಕ ಪರೀಕ್ಷೆಯನ್ನು ಹಾಗೂ ದೈಹಿಕ ಸಾಮರ್ಥ್ಯ ಪರಿಶೀಲನೆ ಪರೀಕ್ಷೆಗಳನ್ನು ನಡೆಸಲು ಅನುಮೋದನೆಗಾಗಿ ಸಭೆಯ ಅವಗಾಹನೆಗೆ ಮಂಡಿಸಿದರು.

ನಿಯಮಾನುಸಾರ ವಿಡಿಯೋ ಚಿತ್ರೀಕರಣದೊಂದಿಗೆ ಅಡುಗೆ ತಯಾರಿಕಾ ಪ್ರಾಯೋಗಿಕ ಪರೀಕ್ಷೆಯನ್ನು ಹಾಗೂ ದೈಹಿಕ ಸಾಮರ್ಥ್ಯ ಪರಿಶೀಲನೆ ಪರೀಕ್ಷೆಗಳನ್ನು ನಡೆಸಲು ಅನುಮೋದನೆ ನೀಡಲಾಯಿತು.

...2)

ಕಾವಲುಗಾರರ ಹುದ್ದೆಯ ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ಈಗಾಗಲೇ ನಡೆಸಿರುವಂತೆ ಜಿಲ್ಲಾ ಪೊಲೀಸ್ ಪೆರೇಡ್ ಮೈದಾನ, ಮಂಡ್ಯ ಇಲ್ಲಿಯೇ ದೈಹಿಕ ಸಾಮರ್ಥ್ಯ ಪರೀಕ್ಷೆ ನಡೆಸಲು ತಿಳಿಸಿ ಈ ಬಗ್ಗೆ ಸೂಕ್ತ ಸಹಕಾರವನ್ನು ನೀಡಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಮಂಡ್ಯ ಜಿಲ್ಲೆ ರವರಿಗೆ ತಿಳಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಉಪ ನಿರ್ದೇಶಕರು
ಹಾಗೂ ಸದಸ್ಯಕಾರ್ಯದರ್ಶಿಗಳು
ಜಿಲ್ಲಾ ಮಟ್ಟದ ಆಯ್ಕೆ ಸಮಿತಿ,
ಸಮಾಜ ಕಲ್ಯಾಣ ಇಲಾಖೆ,
ಮಂಡ್ಯ ಜಿಲ್ಲೆ, ಮಂಡ್ಯ

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು
ಜಿಲ್ಲಾ ಮಟ್ಟದ ಸಮಾಜ ಕಲ್ಯಾಣ
ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ
ಇರುವ ಅಡುಗೆ ಸಹಾಯಕರು ಹಾಗೂ ಕಾವಲುಗಾರರ
ಹುದ್ದೆಗಳ ನೇರ ನೇಮಕಾತಿ ಸಮಿತಿ ಮಂಡ್ಯ ಜಿಲ್ಲೆ, ಮಂಡ್ಯ.

ಕರ್ನಾಟಕ ಸರ್ಕಾರ

# ಸಮಾಜ ಕಲ್ಯಾಣ ಇಲಾಖೆ, ಮಂಡ್ಯ.

ಉಪ ನಿರ್ದೇಶಕರ ಕಛೇರಿ, 1ನೇ ಮಹಡಿ, ಸರ್ಕಾರಿ ಕಛೇರಿಗಳ ಸಮುಚ್ಚಯ, ಹೆಚ್.ಕೆ.ವೀರಣ್ಣಗೌಡ ರಸ್ತೆ, ಜಿಲ್ಲಾಧಿಕಾರಿಗಳ ಕಛೇರಿ ಹತ್ತಿರ, ಮಂಡ್ಯ -571401 ದೂರವಾಣಿ ಸಂಖ್ಯೆ:08232-220772 ಇ.ಮೇಲ್.dswomandya@yahoo.com

ಸಂಖ್ಯೆ:ಉ.ನಿ:ಸಕಇ:ಮಂ:ಸಿಬ್ಬಂದಿ:ಸಿಆರ್:01:2016-17 ದಿನಾಂಕ:14.07.2017

## ತಿಳುವಳಿಕೆ ಪತ್ರ

ವಿಷಯ:- ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಡುಗೆ ಸಹಾಯಕರ ಹುದ್ದೆಗಳಿಗೆ ನೇರ ನೇಮಕಾತಿಗೆ ಸಂಬಂಧಿಸಿದಂತೆ ಅಡುಗೆ ತಯಾರಿಕಾ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ: ಸಕ ಇ:268:ಪಕಸೇ:2015, ಬೆಂಗಳೂರು ದಿನಾಂಕ:29.09.2016.
2. ಕಛೇರಿ ಸಮಸಂಖ್ಯೆ ಅಧಿಸೂಚನೆ ದಿನಾಂಕ:20.10.2016.
3. ಸರ್ಕಾರದ ಆದೇಶ ಸಂ:ಸಕಇ:ಪಕಸೇ:2015(ಭಾ-1), ದಿನಾಂಕ:03-06-2017
4. ಈ ಕಛೇರಿ ಸಮಸಂಖ್ಯೆ ಪ್ರಕಟಣೆ ದಿನಾಂಕ:28-06-2017
5. ದಿನಾಂಕ:14-07-2017ರಂದು ನಡೆದ ಜಿಲ್ಲಾ ಮಟ್ಟದ ಗ್ರೂಪ್ ಡಿ ವೃಂದದ ಆಯ್ಕೆ ಸಮಿತಿ ಸಭೆಯ ನಿರ್ಣಯದಂತೆ.

*****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(2)ರ ಅಧಿಸೂಚನೆಯಲ್ಲಿ ಮಂಡ್ಯ ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ **ಗ್ರೂಪ್ 'ಡಿ' ವೃಂದದ 40 ಅಡುಗೆ ಸಹಾಯಕರ** ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪೈಕಿ ದಾಖಲಾತಿ ಪರಿಶೀಲನೆಯಲ್ಲಿ ಅರ್ಹರಾಗಿವ ಅಭ್ಯರ್ಥಿಗಳಿಗೆ **ದಿನಾಂಕ:05-07-2017ರಂದು ಅಡುಗೆ ಸಹಾಯಕರ ಅಡುಗೆ ತಯಾರಿಕೆ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲಾಗಿತ್ತು.**

ದಿನಾಂಕ: 14-07-2017ರಂದು ನಡೆದ ಜಿಲ್ಲಾ ಮಟ್ಟದ ಗ್ರೂಪ್ ಡಿ ವೃಂದದ ಆಯ್ಕೆ ಸಮಿತಿ ಸಭೆಯಲ್ಲಿ **ದಿನಾಂಕ:05-07-2017 ರಂದು** ನಡೆಸಲಾದ **ಅಡುಗೆ ಸಹಾಯಕರ ಅಡುಗೆ ತಯಾರಿಕೆ ಪ್ರಾಯೋಗಿಕ ಪರೀಕ್ಷೆ** ಗೈರು ಹಾಜರಾದ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶವನ್ನು ನೀಡಲು ತೀರ್ಮಾನಿಸಲಾಗಿರುತ್ತದೆ. ಆದುದರಿಂದ ದಿನಾಂಕ:05-07-2017 ರಂದು ಗೈರು ಹಾಜರಾದ ಕೆಳಕಂಡ ಅಭ್ಯರ್ಥಿಗಳಿಗೆ **ದಿನಾಂಕ: 24-07-2017ರಂದು ಅಡುಗೆ ತಯಾರಿಕಾ ಪ್ರಾಯೋಗಿಕ ಪರೀಕ್ಷೆಯನ್ನು ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಪೋಲೀಸ್ ಕಾಲೋನಿ, ಮಂಡ್ಯ ಇಲ್ಲಿ ಬೆಳಗ್ಗೆ 10.00 ಗಂಟೆಯಿಂದ 5.00 ಗಂಟೆ ವರೆಗೆ ನಡೆಸಲಾಗುವುದು.** ಸದರಿ ದಿನದಂದು ದಾಖಲಾತಿ ಪರಿಶೀಲನೆಯ ಸ್ವೀಕೃತಿ ಪ್ರತಿ, ಗುರುತಿನ ಚೀಟಿ, ತಿಳುವಳಿಕೆ ಪತ್ರ ಹಾಗೂ ಭಾವ ಚಿತ್ರದೊಂದಿಗೆ ಹಾಜರಾಗಲು ತಿಳಿಸಿದೆ,

| SL.No | CANDIDATE NAME | Ref ID |
|---|---|---|
| 1 | SUMALATHA M K | MDS2100568 |
| 2 | BHAGYALAKSHMI P | MDS2100793 |
| 3 | CHANDRALEKHA H C | MDS2100801 |

ಉಪ ನಿರ್ದೇಶಕರು
ಹಾಗೂ ಸದಸ್ಯಕಾರ್ಯದರ್ಶಿಗಳು
ಜಿಲ್ಲಾ ಮಟ್ಟದ ಆಯ್ಕೆ ಸಮಿತಿ,
ಸಮಾಜ ಕಲ್ಯಾಣ ಇಲಾಖೆ,
ಮಂಡ್ಯ ಜಿಲ್ಲೆ, ಮಂಡ್ಯ.

ಕರ್ನಾಟಕ ಸರ್ಕಾರ
**ಸಮಾಜ ಕಲ್ಯಾಣ ಇಲಾಖೆ, ಮಂಡ್ಯ.**
ಉಪ ನಿರ್ದೇಶಕರ ಕಛೇರಿ, 1ನೇ ಮಹಡಿ, ಸರ್ಕಾರಿ ಕಛೇರಿಗಳ ಸಮುಚ್ಚಯ, ಹೆಚ್.ಕೆ.ವೀರಣ್ಣಗೌಡ ರಸ್ತೆ, ಜಿಲ್ಲಾಧಿಕಾರಿಗಳ ಕಛೇರಿ ಹತ್ತಿರ, ಮಂಡ್ಯ -571401 ದೂರವಾಣಿ ಸಂಖ್ಯೆ:08232-220772 ಇ.ಮೇಲ್.dswomandya@yahoo.com

ಸಂಖ್ಯೆ:ಉ.ನಿ:ಸಕಇ:ಮಂ:ಸಿಬ್ಬಂದಿ:ಸಿಆರ್:01:2016-17 ದಿನಾಂಕ:14.07.2017

**ತಿಳುವಳಿಕೆ ಪತ್ರ**

ವಿಷಯ:- ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಾವಲುಗಾರರ ಹುದ್ದೆಗಳಿಗೆ ನೇರ ನೇಮಕಾತಿಗೆ ಸಂಬಂಧಿಸಿದಂತೆ ದೈಹಿಕ ಸಾಮರ್ಥ್ಯ ಪರಿಶೀಲನೆ ಪರೀಕ್ಷೆಗೆ ಹಾಜರಾಗುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ: ಸಕ ಇ:268:ಪಕಸೇ:2015, ಬೆಂಗಳೂರು ದಿನಾಂಕ:29.09.2016.
2. ಕಛೇರಿ ಸಮಸಂಖ್ಯೆ ಅಧಿಸೂಚನೆ ದಿನಾಂಕ:20.10.2016.
3. ಸರ್ಕಾರದ ಆದೇಶ ಸಂ:ಸಕಇ:ಪಕಸೇ:2015(ಭಾ-1), ದಿನಾಂಕ:03-06-2017
4. ಈ ಕಛೇರಿ ಸಮಸಂಖ್ಯೆ ಪ್ರಕಟಣೆ ದಿನಾಂಕ:28-06-2017
5. ದಿನಾಂಕ:14-07-2017ರಂದು ನಡೆದ ಜಿಲ್ಲಾ ಮಟ್ಟದ ಗ್ರೂಪ್ ಡಿ ವೃಂದದ ಆಯ್ಕೆ ಸಮಿತಿ ಸಭೆಯ ನಿರ್ಣಯದಂತೆ.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2)ರ ಅಧಿಸೂಚನೆಯಲ್ಲಿ ಮಂಡ್ಯ ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ **ಗ್ರೂಪ್ 'ಡಿ'** ವೃಂದದ 33 **ಕಾವಲುಗಾರರ** ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪೈಕಿ ದಾಖಲಾತಿ ಪರಿಶೀಲನೆಯಲ್ಲಿ ಅರ್ಹರಾಗಿರುವ ಅಭ್ಯರ್ಥಿಗಳಿಗೆ **ದಿನಾಂಕ:06-07-2017 ರಂದು ಕಾವಲುಗಾರರ ದೈಹಿಕ ಸಾಮರ್ಥ್ಯ ಪರಿಶೀಲನೆ ಪರೀಕ್ಷೆ**ಯನ್ನು ನಡೆಸಲಾಗಿತ್ತು.

ದಿನಾಂಕ: 14-07-2017ರಂದು ನಡೆದ ಜಿಲ್ಲಾ ಮಟ್ಟದ ಗ್ರೂಪ್ ಡಿ ವೃಂದದ ಆಯ್ಕೆ ಸಮಿತಿ ಸಭೆಯಲ್ಲಿ **ದಿನಾಂಕ:06-07-2017 ರಂದು** ನಡೆಸಲಾದ **ಕಾವಲುಗಾರರ ದೈಹಿಕ ಸಾಮರ್ಥ್ಯ ಪರಿಶೀಲನೆ ಪರೀಕ್ಷೆ**ಗೆ ಗೈರು ಹಾಜರಾದ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶವನ್ನು ನೀಡಲು ತೀರ್ಮಾನಿಸಲಾಗಿರುತ್ತದೆ. ಆದುದರಿಂದ ದಿನಾಂಕ:06-07-2017 ರಂದು ಗೈರು ಹಾಜರಾದ ಕೆಳಕಂಡ ಅಭ್ಯರ್ಥಿಗಳಿಗೆ **ದಿನಾಂಕ: 24-07-2017ರಂದು ಕಾವಲುಗಾರರ ದೈಹಿಕ ಸಾಮರ್ಥ್ಯ ಪರಿಶೀಲನೆ ಪರೀಕ್ಷೆ** ಯನ್ನು **ಪೋಲೀಸ್ ಪೆರೇಡ್ ಮೈದಾನ, ಚಾಮುಂಡೇಶ್ವರಿ ನಗರ, ಮಂಡ್ಯ** ಇಲ್ಲಿ ಬೆಳಗ್ಗೆ 10.00 ಗಂಟೆಯಿಂದ 5.00 ಗಂಟೆ ವರೆಗೆ ನಡೆಸಲಾಗುವುದು. ಸದರಿ ದಿನದಂದು ದಾಖಲಾತಿ ಪರಿಶೀಲನೆಯ ಸ್ವೀಕೃತಿ ಪ್ರತಿ, ಗುರುತಿನ ಚೀಟಿ, ತಿಳುವಳಿಕೆ ಪತ್ರ ಹಾಗೂ ಭಾವ ಚಿತ್ರದೊಂದಿಗೆ ಹಾಜರಾಗಲು ತಿಳಿಸಿದೆ.

| SL.No | CANDIDATE NAME | Ref ID |
|---|---|---|
| 1 | AKSHAY S | MDS1101420 |
| 2 | DIVYASHREE T R | MDS1100563 |
| 3 | LATHAMANI M T | MDS1100959 |
| 4 | MADESHA K C | MDS1101198 |
| 5 | ANEEPU A N | MDS1101000 |
| 6 | NAGENDRASINGH KILLEDAR | MDS1101244 |
| 7 | CHETHANKUMAR | MDS1101384 |
| 8 | MOHANAKUMARA S | MDS1100183 |
| 9 | PRAMOD M | MDS1101609 |
| 10 | ROOPA S P | MDS1100073 |
| 11 | SHOMBAMMA K S | MDS1101334 |

| | | |
|---|---|---|
| 12 | KEERTHANKUMAR Y K | MDS1100439 |
| 13 | NAGARAJU B K | MDS1101697 |
| 14 | KIRAN NAYAKA S R | MDS1101257 |
| 15 | PRASHANTH S | MDS1100151 |
| 16 | RAVIRAJ N | MDS1100017 |
| 17 | RUKMINI B P | MDS1101049 |
| 18 | SURESHA C | MDS1100603 |
| 19 | MADEVAPPA MADAR | MDS1101216 |
| 20 | PALLAVI S P | MDS1100134 |
| 21 | RAJINI K S | MDS1100830 |
| 22 | MANJUNATH PATTAR | MDS1101289 |
| 23 | PRAKSHA B K | MDS1100181 |
| 24 | SHABUDDIN | MDS1101005 |
| 25 | MALLIKARJUN SURESH KUMBAR | MDS1101074 |
| 26 | DARSHANA N R | MDS1101811 |
| 27 | ANILK M | MDS1101492 |

ಉಪ ನಿರ್ದೇಶಕರು
ಹಾಗೂ ಸದಸ್ಯಕಾರ್ಯದರ್ಶಿಗಳು
ಜಿಲ್ಲಾ ಮಟ್ಟದ ಆಯ್ಕೆ ಸಮಿತಿ,
ಸಮಾಜ ಕಲ್ಯಾಣ ಇಲಾಖೆ,
ಮಂಡ್ಯ ಜಿಲ್ಲೆ, ಮಂಡ್ಯ.